## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1402 (1163) |
| ಸದಸ್ಯರ ಹೆಸರು | : | ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16.03.2021 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರಿನ ಪ್ರಸಿದ್ಧ ಚಾಮರಾಜ ಜೋಡಿ ರಸ್ತೆಯ ಇಕ್ಕೆಲಗಳಲ್ಲಿ ಹರಿಯುವ ತೆರೆದ ದೊಡ್ಡ ಚರಂಡಿಯಲ್ಲಿ ಕಸಕಡ್ಡಿ ತ್ಯಾಜ್ಯ ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರಿಂದ ಕೊಳಚೆ ನೀರು ಸರಾಗವಾಗಿ ಹರಿಯದೆ ಕಲುಷಿತ ವಾತಾವರಣ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು.<br><br>ಚಾಮರಾಜ ಜೋಡಿ ರಸ್ತೆಯ ಇಕ್ಕೆಲಗಳಲ್ಲಿ ಹರಿಯುವ ತೆರೆದ ದೊಡ್ಡ ಚರಂಡಿಯಲ್ಲಿ ಪ್ರತಿ ವರ್ಷವು ಹೂಳು ತೆಗೆದು ಸ್ವಚ್ಛಗೊಳಿಸಲು ಕ್ರಮ ವಹಿಸಲಾಗುತ್ತಿದೆ. |
| ಆ) | ಈ ಮೋರಿಯನ್ನು ಸ್ವಚ್ಛಗೊಳಿಸಿ, ತೆರೆದ ಮೋರಿಯ ಮೇಲೆ ತಂತಿ ಜಾಲರಿ ಅಳವಡಿಸಿ, ಯಾರೂ ಕಸಕಡ್ಡಿ ತ್ಯಾಜ್ಯವನ್ನು ಚರಂಡಿಗೆ ಸುರಿಯದಂತೆ ಕ್ರಮ ಜರುಗಿಸಲಾಗುವುದೇ? | ಚಾಮರಾಜ ಜೋಡಿ ರಸ್ತೆಯ ದೊಡ್ಡ ಮಳೆ ನೀರು ಚರಂಡಿಯಲ್ಲಿ ಪ್ರತಿ ವರ್ಷವು ಹೂಳು ತೆಗೆದು ಸ್ವಚ್ಛಗೊಳಿಸಲಾಗುತ್ತಿದೆ ಹಾಗೂ ತೆರೆದ ಚರಂಡಿಯಲ್ಲಿ ಕಸಕಡ್ಡಿ ತ್ಯಾಜ್ಯ ತುಂಬುವುದನ್ನು ತಡೆಗಟ್ಟಲು ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿಯಲ್ಲಿ ವಾರ್ಡ್ ನಂ. 23 ರಲ್ಲಿ ಚರಂಡಿ ನಿರ್ಮಾಣ ಹಾಗೂ ಶಾಂತಲ ಚಿತ್ರಮಂದಿರ ಪಕ್ಕದಲ್ಲಿ ಮಳೆ ನೀರು ಚರಂಡಿಗೆ ಗ್ರಿಲ್ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br><br>ವಾರ್ಡ್ ಸಂಖ್ಯೆ 51 ರ ವ್ಯಾಪ್ತಿಯ ಚೆಲುವಾಂಬ ಅಗ್ರಹಾರ ರಸ್ತೆಯಿಂದ ಗನ್ ಹೌಸ್ ವೃತ್ತದವರೆಗೆ ಮಳೆ ನೀರಿನ ದೊಡ್ಡ ಚರಂಡಿಗೆ ಗ್ರಿಲ್ ಅಳವಡಿಸುವ ಕಾಮಗಾರಿಯನ್ನು ಮುಂದಿನ ಹಂತದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ. |

ನಅಇ 39 ಎಸಿಎಂ 2021 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು